# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್.ಸಿ. 258/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಯೋಗೀಶ್.ಹೆಚ್. | ಪ್ರಮಾಣ ಮಾಡಿಸಿದ ದಿನಾಂಕಃ | |
| ತಂದೆ/ಗಂಡನ ಹೆಸರು | ಃ ಶ್ರೀ ಹುಲಿಯಪ್ಪ ಗೌಡ | 08.01.2025 | |
| ವಯಸ್ಸು | ಃ 44 ವರ್ಷ | | |
| ವೃತ್ತಿ | ಃ ಪಿ.ಡಿ.ಒ, ವರಕೋಡು ಗ್ರಾಮ ಪಂಚಾಯಿತಿ | ಪ್ರಾ.ಸಾ. ಃ | 14 |
| ವಾಸಸ್ಥಳ | ಃ ವಿಜಯನಗರ, ಮೈಸೂರು | ಪಾ.ಸಾ. ಃ | 18 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *2020* ರಿಂದ *2024* ರವರೆಗೆ ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ ಪಿ.ಡಿ.ಒ ಆಗಿ ಕೆಲಸ ಮಾಡಿದ್ದೇನೆ. ಆ ಕಾಲಕ್ಕೆ ಮೇಟಗಳ್ಳಿ ಪೋಲೀಸ್ ಠಾಣೆಯ ಪೊಲೀಸ್ ಅಧಿಕಾರಿಗಳು ಟಿ.ಶಾರದಮ್ಮ ಎನ್ನುವವರ ಆಸ್ತಿ ಸಂಖ್ಯೆ *183* ರ *2* ನೇ ಮಳಿಗೆಯಲ್ಲಿ ಬೇಕರಿ ಇದ್ದು ಆ ಬೇಕರಿಯ ರಹದಾರಿ ಪತ್ರ ಮತ್ತು ಖಾತಾ ಎಕ್ಸ್ ಟ್ರಾಕ್ಟ್ ಕೊಡುವಂತೆ ಮನವಿ ಪತ್ರ ಕಳುಹಿಸಿದ್ದರು. ಆಗ ನಾನು ದಾಖಲೆಗಳನ್ನು ಪರಿಶೀಲಿಸಿದಾಗ ಆ ಆಸ್ತಿ ಸಂಖ್ಯೆ *269/230* ಎಂದು ಕಂಡುಬಂದಿತ್ತು ಮತ್ತು ಆ ಕಟ್ಟಡದಲ್ಲಿ ರಾಘವೇಂದ್ರ ಬೇಕರಿ ಮತ್ತು ಸ್ವೀಟ್ಸ್ ಹೆಸರಿನ ಅಂಗಡಿ ನಡೆಸಲು ಯಾವುದೇ ಪರವಾನಗಿ ಪಡೆದಿರಲಿಲ್ಲ. ಆ ಬಗ್ಗೆ ನಾನು ಮಾಹಿತಿಯನ್ನು ಮತ್ತು ಡಿಮ್ಯಾಂಡ್ ಎಕ್ಸ್ ಟ್ರಾಕ್ಟ್ ಅನ್ನು ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ದಾಖಲೆಗಳು ತನಿಖಾಧಿಕಾರಿಯ ಪತ್ರ, ಉದ್ದಿಮೆ ಪರವಾನಗಿ ಬಗ್ಗೆ ವರದಿ, ಆ ಆಸ್ತಿ ಬಗ್ಗೆ ಪತ್ರ ಮತ್ತು ಡಿಮ್ಯಾಂಡ್

ರಿಜಿಸ್ಟರ್ ಇರುತ್ತವೆ. ಸದರಿ ದಾಖಲೆಗಳನ್ನು ಅನುಕ್ರಮವಾಗಿ ನಿ.ಪಿ-*22* ರಿಂದ *25* ಎಂದು ಗುರುತಿಸಿದೆ. ಪ್ರತಿ ವರ್ಷ ಡಿಮ್ಯಾಂಡ್ ರಿಜಿಸ್ಟರ್ ನ ಸಂಖ್ಯೆಬದಲಾಗುವುದರಿಂದ ಈ ಪ್ರಕರಣದ ಆಸ್ತಿ ಸಂಖ್ಯೆಬದಲಾಗುತ್ತದೆ. ಆ ಆಸ್ತಿ ಟಿ.ಶಾರದಮ್ಮ ಇವರ ಹೆಸರಿನಲ್ಲಿತ್ತು.

ಪಾಟೀ ಸವಾಲು : ಆರೋಪಿ ಪರ ವಕೀಲರು ಗೈರು ಹಾಜರಿದ್ದು ಆರೋಪಿತ ಸಮಯ ಕೋರಿದ್ದರಿಂದ ಮುಂದೂಡಲಾಯಿತು

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು